# ದಬಕ ದಬಾ ಐಸಾ

ದಬಕ ದಬಾ ಐಸಾ
ಇನ್ನೂ ಸ್ವಲ್ಪ ಐಸಾ

ತುಂಬಾ ತೂಕದ ವಸ್ತು
ತಳ್ಳಿ ತಳ್ಳಿ ಸುಸ್ತು

ಹೂತು ಹೋದ ಕಾರಾ?
ಹಂಪೆಯ ಕಲ್ಲಿನ ತೇರಾ?

ಬೀಟೆ ಮರದ ಮೋಪಾ?
ಎಷ್ಟು ಭಾರವೋ ಪಾಪ!

ದೊಡ್ಡ ಬಂಡೆ ಕಲ್ಲಾ?
ಅಲ್ಲ, ಅಲ್ಲವೇ ಅಲ್ಲ

ನೀವೇ ನೋಡಿ ಇಗೊಳ್ಳಿ
ಭೂತಗನ್ನಡಿ ತಗೊಳ್ಳಿ

ನಗ್ತೀರಿ ಅದನ್ನು ಕಂಡು
ಸಣ್ಣ ಜಿಲೇಬಿ ತುಂಡು!

ತಳ್ತಿರೋರು ಯಾರು?
ಕೆಂಪು ಇರುವೆ ಆರು!

